ಆದ ಬೆಳೆ ನಷ್ಟಕ್ಕೆ ಬೆಳೆ ಪರಿಹಾರ ಕೊಡುವುದಕ್ಕೆ ಆಗುತ್ತದೋ ಇಲ್ಲವೋ ಎಂದು ಯೋಚನೆ ಮಾಡಬೇಕಾಗುತ್ತದೆ ಎಂದು ಹೇಳಿದರು. ರೈತ ಸಂಕಷ್ಟಕ್ಕೆ ಈಡಾಗಿ ಬೀದಿ ಪಾಲು ಆಗುವಾಗ ಸರ್ಕಾರ ಬೆಳೆ ಪರಿಹಾರ ಕೊಡುವ ನೀತಿ ಇಟ್ಟುಕೊಂಡಿದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:– ನಾನು ಈಗಾಗಲೇ ತೊಗರಿ ಬೆಳೆ ಉದಾಹರಣೆ ಕೊಟ್ಟಿದ್ದೇನೆ. ಇಂತಹ ಬಹಳ ದೊಡ್ಡ ವಿಸ್ತೀರ್ಣದಲ್ಲಿ ಬೆಳೆಯತಕ್ಕ ಬೆಳೆಗಳಿಗೆ ಪರಿಹಾರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಇಂತಹ ಬೆಳೆಗಳನ್ನು ಇನ್‌ಷ್ಯೂರ್ ಮಾಡುವುದಕ್ಕೆ ಸಾಕಷ್ಟು ಅವಕಾಶ ಇದೆ, ಬೇರೆ ಒಂದು ಮಾರ್ಗವನ್ನು ಅವಲಂಭಿಸಬಹುದೇ ಹೊರತು ಸರ್ಕಾರದಿಂದ ಅಷ್ಟು ದೊಡ್ಡ ಪ್ರದೇಶಕ್ಕೆ ಪರಿಹಾರ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಕೆ. ಹರ್ಷಕುಮಾರ ಗೌಡ:– ಕ್ಯಾಷ್ ಕಾಂಪನ್‌ಸೇಷನ್ ಕೊಡುವ ವ್ಯವಸ್ಥೆ ಕಂದಾಯ ಮಂತ್ರಿಗಳಿಂದ ಆಗುತ್ತಾ ಇದೆ. ತಮ್ಮ ಇಲಾಖೆಯ ವತಿಯಿಂದ ಕಂದಾಯ ಇಲಾಖೆಗೆ ತಾವು ಶಿಫಾರಸ್ಸು ಮಾಡಿದ್ದೀರಾ ? ಇಷ್ಟು ಕೋಟಿ ರೂಪಾಯಿಗಳು ರಾಜ್ಯದಲ್ಲಿ ನಷ್ಟ ಆಗಿದೆ ಎಂದು ತಿಳಿಸಿದ್ದೀರಾ ? ಕಂದಾಯ ಇಲಾಖೆಯವರು ಯಾವ ಆಧಾರದ ಮೇಲೆ ಬೆಲೆ ಕಟ್ಟುತ್ತಾರೆ ? ಕೃಷಿ ಮತ್ತು ಕಂದಾಯ ಇಲಾಖೆಗೆ ಕೋ–ಆರ್ಡಿನೇಷನ್ ಇದೆಯೇ ? ಇಡೀ ರಾಜ್ಯದಲ್ಲಿ ರೈತರು ಸಂಕಷ್ಟಕ್ಕೆ ಈಡಾದಾಗ ಬೆಳೆ ಪರಿಹಾರ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ. ಕೇಂದ್ರ ಸರ್ಕಾರದಿಂದ ನಷ್ಟಕ್ಕೆ ಹಣ ಕೊಡುತ್ತದೆಂದು ಕಂದಾಯ ಇಲಾಖೆಯ ಮಂತ್ರಿಗಳು ಹೇಳುತ್ತಾರೆ. ಇವತ್ತು ರಾಜ್ಯದಲ್ಲೂ ಕೂಡ 300 ಕೋಟಿ ರೂಪಾಯಿಗಳಷ್ಟು ಬೆಳೆ ಹಾಳಾಗಿದೆ. ಇದರಲ್ಲಿ 26 ಕೋಟಿಯಷ್ಟು ಬೆಲೆಯ ಭತ್ತವೇ ಹಾಳಾಗಿದೆ. ಒಂದು ಕಡೆ ಪರಿಹಾರ ಸಿಗುತ್ತದೆಂದು ಹೇಳಿ ಮತ್ತೊಂದು ಕಡೆ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಈ ಬಗ್ಗೆ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:– ಉಪಾಧ್ಯಕ್ಷಿಣಿಯವರೇ, ಮಳೆಯಿಂದ ಪ್ರವಾಹದಿಂದ ನಷ್ಟ ಆಗಿರತಕ್ಕ ಸ್ಥಳಗಳಲ್ಲಿ ಆ ಜಮೀನಿಗೆ ಆಗಿರತಕ್ಕ ತೊಂದರೆ ಇದ್ದರೆ ಅದಕ್ಕೆ ಪರಿಹಾರ ಮಾಡಬಹುದು. ಸರ್ಕಾರ ಕಾರ್ಯಕ್ರಮ ಕೈಗೊಂಡು ಸರಿಪಡಿಸಬಹುದೇ ಹೊರತು ಬೆಳೆಗೆ ಪರಿಹಾರ ಕೊಡುತ್ತೇವೆಂದು ಹೇಳಿ ರೆವಿನ್ಯೂ ಇಲಾಖೆಯವರು ಎಷ್ಟರಮಟ್ಟಿಗೆ ಯಾವ ದೃಷ್ಟಿಯಿಂದ ಹೇಳಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಅವರ ಜೊತೆ ಸಮಾಲೋಚನೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ:– ಇದು ರೈತರಿಗೆ ಸಂಬಂಧಪಟ್ಟ ವಿಚಾರವಾದ್ದರಿಂದ ಒಂದು ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಿ. ಸ್ವಾಭಾವಿಕವಾಗಿ ರೈತರಿಗೆ ಆಗತಕ್ಕ ನಷ್ಟದ ಬಗ್ಗೆ ಮಂತ್ರಿಗಳು ಹೇಳಿದ್ದಾರೆ. ಪ್ರವಾಹ ಬಂತು ಎಂದರೆ ಪರಿಹಾರ ಕೊಡುತ್ತಾರೆ. ಅದೇ ರೀತಿ ಇದೂ ಕೂಡಾ ರಾಜ್ಯದಲ್ಲಿ ಸ್ವಾಭಾವಿಕವಾಗಿ ಆಗಿರತಕ್ಕ ನ್ಯಾಚುರಲ್ ಕೆಲಾಮಿಟಿ. ಪ್ರವಾಹದಿಂದ ಆಗುವ ನಷ್ಟಕ್ಕೆ ಹೇಗೆ ಪರಿಹಾರ ಕೊಡುತ್ತೀರೋ ಅದೇ ರೀತಿ ಇದನ್ನು ಪರಿಗಣಿಸಿ ಕ್ರಮ ತೆಗೆದುಕೊಳ್ಳುತ್ತೀರಾ ?

ಉಪಾಧ್ಯಕ್ಷರು:– ಇದೇ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಈಗ ಮುಂದಿನ ಪ್ರಶ್ನೆ.

ಆರಾಧನಾ ಯೋಜನೆಯನ್ವಯ ಬಿಡುಗಡೆಯಾದ ಹಣ

2 13. ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆರಾಧನಾ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಈವರೆವಿಗೆ ಬಿಡುಗಡೆ ಮಾಡಿರುವ

ಹಣದ ಮೊತ್ತವೆಷ್ಟು ? ಹಾಗೂ ಕಟ್ಟಿಸಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು ? (ವಿವರಗಳನ್ನು ನೀಡುವುದು)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು):–

ರೂ. 7.24 ಕೋಟಿ

ಕಟ್ಟಿಸಿರುವ ದೇವಸ್ಥಾನಗಳು : 39

ಕಟ್ಟುತ್ತಿರುವ ದೇವಸ್ಥಾನಗಳು : 496

(ವಿವರ ಲಗತ್ತಿಸಿದೆ)

ಅನುಬಂಧ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 213ಕ್ಕೆ ಸಂಬಂಧಿಸಿದ ಜಿಲ್ಲಾವಾರು ಮಾಹಿತಿಯ ತಃಖ್ತೆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಆರಾಧನಾ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರ ಈವರೆವಿಗೆ ಬಿಡುಗಡೆ ಮಾಡಿದ ಮೊತ್ತ	ಕಟ್ಟಿಸಿರುವ ದೇವಸ್ಥಾನಗಳ ವಿವರ	ಕಟ್ಟಿಸಲಾಗುತ್ತಿರುವ ದೇವಸ್ಥಾನಗಳ ಪ್ರಗತಿಯ ವಿವರ	ಒಟ್ಟು
1	2	3	4	5	6
1.	ಬೆಂಗಳೂರು (ನಗರ)	ರೂ. 43,39,275–00	–	–	–
2.	ಬೆಂಗಳೂರು (ಗ್ರಾಮಾಂತರ)	ರೂ. 39,92,850–00	–	67	67
3.	ಬೆಳಗಾಂ	ರೂ. 58,94,130–00	1	15	16
4.	ಬಳ್ಳಾರಿ	ರೂ. 29,47,565–00	10	149	159
5.	ಬೀದರ್	ರೂ. 19,65,710–00	–	2	2
6.	ಬಿಜಾಪುರ	ರೂ. 49,12,275–00	14	–	14
7.	ಚಿಕ್ಕಮಗಳೂರು	ರೂ. 19,64,710–00	–	–	–
8.	ಚಿತ್ರದುರ್ಗ	ರೂ. 36,02,135–00	–	32	32
9.	ದಕ್ಷಿಣ ಕನ್ನಡ	ರೂ. 49,12,275–00	–	8	08
10.	ಧಾರವಾಡ	ರೂ. 58,94,130–00	1	5	6
11.	ಗುಲ್ಬರ್ಗಾ	ರೂ. 42,56,705–00	–	65	65
12.	ಹಾಸನ	ರೂ. 26,20,280–00	–	27	27
13.	ಕೊಡಗು	ರೂ. 9,82,855–00	–	–	–
14.	ಕೋಲಾರ	ರೂ. 39,29,420–00	–	45	45
15.	ಮಂಡ್ಯ	ರೂ. 29,47,565–00	–	–	–
16.	ಮೈಸೂರು	ರೂ. 52,39,560–00	11	56	67
17.	ರಾಯಚೂರು	ರೂ. 36,02,295–00	–	9	9
18.	ಶಿವಮೊಗ್ಗ	ರೂ. 32,74,850–00	–	–	–
19.	ತುಮಕೂರು	ರೂ. 42,56,705–00	–	–	–
20.	ಉತ್ತರ ಕನ್ನಡ	ರೂ. 19,64,710–00	2	16	18
	ಒಟ್ಟು ರೂ.	7,24,00,000–00	39	496	535

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಉಪಾಧ್ಯಕ್ಷೆಣಿಯವರೇ, ಆರಾಧನಾ ಯೋಜನೆ ಬಗ್ಗೆ ಮಂತ್ರಿಗಳು ಒದಗಿಸಿಕುವ ಪಟ್ಟಿಯನ್ನು ನೋಡಿದರೆ ಕೆಲವೇ ಜಿಲ್ಲೆಗಳಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಬಂದಿದೆ. ಮತ್ತೆ ಕೆಲವು ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಅನುಷ್ಠಾನಕ್ಕೆ ಬಂದೇ ಇಲ್ಲ. ಇದಕ್ಕೆ ಕಾರಣವೇನು ? ಎರಡನೆಯ ಪ್ರಶ್ನೆ, ಈವ್ಹೊಂದು ಸವಲತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮಾತ್ರ ಸೀಮಿತವಾಗಿದೆಯೆಂದು ನಾನು ಭಾವಿಸಿಕೊಳ್ಳುತ್ತೇನೆ. ಪರಿಶಿಷ್ಟ ಜಾತಿಯನ್ನು ವಿಂಗಡಣೆ ಮಾಡುವಾಗ ಹರಿಜನ ಕಾಲೋನಿ, ಲಂಬಾಣಿ ತಾಂಡ ಮತ್ತು ಇತರೆಯೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳ

ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ, ಇವುಗಳ ಜೊತೆಗೆ ಗೊಲ್ಲರಹಟ್ಟಿಗಳು ಬಹಳ ಪ್ರಾಮುಖ್ಯವಾದವು. ತಮ್ಮ ಡೆಫನಿಷನ್‌ನಲ್ಲಿ ಇದು ಸೇರಿಕೊಂಡಿದೆಯೇ ? ಸೇರಿಕೊಳ್ಳದಿದ್ದರೆ, ಅದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ:– ಮಾನ್ಯ ಸದಸ್ಯರ ಪ್ರಶ್ನೆಗೆ ಎಲ್ಲಾ ಜಿಲ್ಲೆಯಲ್ಲೂ ಸರಿಯಾದ ಕಾರ್ಯಕ್ರಮವಾಗಿಲ್ಲ, ಕೆಲವು ಜಿಲ್ಲೆಯಲ್ಲಿ ಮಾತ್ರ ಮಾಡಿದ್ದೇವೆ ಕೆಲವು ಜಿಲ್ಲೆಯಲ್ಲಿ ಮಾಡಿಲ್ಲವೆಂದು ಹೇಳಿದ್ದೇವೆ. ಪ್ರತಿ ತಾಲ್ಲೂಕಿನಲ್ಲೂ ಒಂದೊಂದು ಆರಾಧನಾ ಕಮಿಟಿಯನ್ನು ರಚನೆ ಮಾಡಿದ್ದೇವೆ. ಆ ಕಮಿಟಿಗಳು ಆ ಕೆಲಸ ಮಾಡಬೇಕು. ಈ ಕೆಲಸ ಕಾರ್ಯಗಳನ್ನು ನೋಡಲಿಕ್ಕೆ ಜಿಲ್ಲಾಮಟ್ಟದಲ್ಲಿ ಒಂದೊಂದು ಕಮಿಟಿ ಇದೆ. ಆ ಜಿಲ್ಲೆಯವರು ಅದರ ಉಸ್ತುವಾರಿಯನ್ನು ನೋಡುತ್ತಾರೆ. ಅದಕ್ಕೆ ಹಣವನ್ನು ಮಂಜೂರು ಮಾಡತಕ್ಕವರು ತಹಶೀಲ್ದಾರ್‌ರವರು. ಜಿಲ್ಲಾ ಪರಿಷತ್ತಿನ ಸಲಹೆಯ ಮೇಲೆ ತಹಶೀಲ್ದಾರ್‌ರವರು ಹಣವನ್ನು ಮಂಜೂರು ಮಾಡುತ್ತಾರೆ. ಕೆಲವು ಜಿಲ್ಲೆಗಳಲ್ಲಿ ಈ ಕೆಲಸವಾಗಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಾರೆ. ಅದನ್ನು ನೋಡಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ತಾಂಡಗಳು ಪರಿಶಿಷ್ಟ ಜಾತಿಗೆ ಸೇರಿವೆ. ಗೊಲ್ಲರಹಟ್ಟಿಯ ಬಗ್ಗೆ ಹೇಳಿದ್ದಾರೆ. ಕೆಲವು ಗೊಲ್ಲರಹಟ್ಟಿಗಳು ಅವರ ಗಮನಕ್ಕೆ ಬಂದರೆ ಅದನ್ನು ನನಗೆ ಕಳುಹಿಸಿಕೊಟ್ಟರೆ ಅದನ್ನು ಎಕ್ಸಾಮಿನ್ ಮಾಡಿ ಅದು ರೂಲ್ಸ್‌ಗೆ ಅನುಗುಣವಾಗಿ ಬಂದರೆ ಅದನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಈವೊಂದು ಯೋಜನೆಯಡಿಯಲ್ಲಿ ಪ್ರತಿಯೊಂದು ಮತದಾರ ಕ್ಷೇತ್ರಕ್ಕೆ ಒಂದು ಮಾಡ್ರನ್ ಟೆಂಪಲ್ ಕೊಡುತ್ತೇವೆಂದು ಸರ್ಕಾರಿ ಆದೇಶ ಮಾಡಿದ್ದಾರೆ. ಅದನ್ನು ಮಾಡಿ, ಅದು ಒಳ್ಳೆಯ ಕೆಲಸ. ಮತದಾರ ಕ್ಷೇತ್ರವಾರು ಮಾಡಿದ್ದು ಸರಿ. ಆದರೆ ಉತ್ತರ ಕನ್ನಡ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಮತದಾರ ಕ್ಷೇತ್ರಗಳು ಕಡಿಮೆ, ತಾಲ್ಲೂಕುಗಳು ಹೆಚ್ಚಾಗಿವೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಹನ್ನೊಂದು ತಾಲ್ಲೂಕುಗಳಿವೆ. ಆರು ಮತದಾರ ಕ್ಷೇತ್ರಗಳಿವೆ. ಅದೇ ರೀತಿಯಲ್ಲಿ ಬೆಳಗಾಂ ಜಿಲ್ಲೆಯಲ್ಲಿ 1ಕ್ಷೇತ್ರದ 10ತಾಲ್ಲೂಕುಗಳು ಇವೆ. ಹಾಗಾದರೆ ಅಲ್ಲಿ 18ಮಾಡ್ರನ್ ಟೆಂಪಲ್‌ಗಳು ಆಗುತ್ತವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 11 ತಾಲ್ಲೂಕುಗಳು ಇದ್ದರೂ ಸಹ ಕೇವಲ 6 ಮಾಡ್ರನ್ ಟೆಂಪಲ್‌ಗಳು ಆಗುತ್ತವೆ. ಉತ್ತರ ಕನ್ನಡ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ತಾಲ್ಲೂಕುವಾರು ಮಾಡ್ರನ್ ಟೆಂಪಲ್‌ಗಳನ್ನು ಮಾಡಿರಿಯೆಂದು ನಾನು ಹೇಳಿದ್ದೆ. ಮಾಡುತ್ತೇವೆಂದು ನನಗೆ ಭರವಸೆಯನ್ನು ಸಹ ಕೊಟ್ಟಿದ್ದರು. ಅದರ ಬಗ್ಗೆ ಏನು ಹೇಳುತ್ತೀರಿ ಎಂದು ನಾನು ಕೇಳುತ್ತೇನೆ.

SRI M. RAJSHEKHARA MURTHY:– I will examine this suggestion.

ಶ್ರೀ ವಾಟಾಳ್ ನಾಗರಾಜ್:– ಆರಾಧನಾ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಮೇಲುಸಕ್ಕರೆಶೆಟ್ಟರು ಜನಾಂಗ, ಪರಿವಾರ ನಾಯಕ ಜನಾಂಗದವರು ವಾಸಿಸುವ ಪ್ರದೇಶಗಳಲ್ಲಿ ದೇವಾಲಯಗಳನ್ನು ಮಾಡಿ ಅವರಿಗೆ ಅನುಕೂಲ ಮಾಡಿಕೊಡಲಿಕ್ಕೆ ಕಾನೂನು ತಿದ್ದುಪಡಿ ಮಾಡಿಕೊಳ್ಳುತ್ತೀರಾ ಎಂದು ನಾನು ತಮ್ಮ ಮೂಲಕ ಕೇಳುತ್ತೇನೆ, ಇದು ಅತಿ ಮುಖ್ಯವಾದುದು.

ಶ್ರೀ ಎಂ. ರಾಜಶೇಖರಮೂರ್ತಿ:– ಕಮಿಟ್ ಮಾಡಲಾರೆ. ಏಕೆಂದರೆ ಈ ಯೋಜನೆ ಇರತಕ್ಕದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಲಂಬಾಣಿ ತಾಂಡಗಳಿಗೆ ಸೀಮಿತವಾಗಿದೆ. ಹೀಗೆ ಒಂದೊಂದಾಗಿ ಸೇರಿಸಿಕೊಳ್ಳುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ.

ಉಪಾಧ್ಯಕ್ಷರು:– ಮಾನ್ಯ ವೈ.ಕೆ. ರಾಮಯ್ಯನವರು ಕೊನೆಯ ಪ್ರಶ್ನೆಯನ್ನು ಕೇಳಿ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಮಂತ್ರಿಗಳಿಂದ ಸ್ಪಷ್ಟವಾದ ಉತ್ತರವನ್ನು ಬಯಸುತ್ತಿದ್ದೇನೆ.

ಗೊಲ್ಲರಹಟ್ಟಿಗಳು ನಿಮ್ಮ ಡೆಫನಿಷನ್‌ನಲ್ಲಿ ಬರುತ್ತವೆಯೆ ? ಇವರು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದಲ್ಲಿ ಬರುತ್ತಾರೆಯೆ ? ಗೊಲ್ಲರಹಟ್ಟಿಯ ಜನ ಈ ಸವಲತ್ತಿಗೆ ಹೊರತಾಗಿದ್ದಾರೋ ಅಥವಾ ಒಳಗಾಗಿದ್ದಾರೋ ಅದಕ್ಕೆ ನಿರ್ದಿಷ್ಟವಾದ ಉತ್ತರ ಬೇಕಾಗುತ್ತದೆ. ಎರಡನೆಯದಾಗಿ ಈ ಸವಲತ್ತು ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ತುಮಕೂರು ಜಿಲ್ಲೆಯ ಒಂದು ಊರಿನಲ್ಲಿ ಶ್ರೀರಾಮಚಂದ್ರನ ದೇವಾಲಯ ಕಟ್ಟುವುದಕ್ಕೆ ಉಪಯೋಗಿಸಲಾಗಿದೆ. ನನಗೆ ತಿಳಿದಮಟ್ಟಿಗೆ ದಲಿತ ಬಂಧುಗಳು ಶ್ರೀರಾಮಚಂದ್ರನ ದೇವಾಲಯ ಕಟ್ಟುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ದಲಿತ ಜನಾಂಗದ ಕೇರಿಗಳಲ್ಲಿ ಸಾವಿರಾರು ಶ್ರೀರಾಮಚಂದ್ರನ ಮಂದಿರಗಳಿವೆ.

ಶ್ರೀ ಎಂ. ನಾರಾಯಣಸ್ವಾಮಿ:– ಹರಿಜನರೂ ಕೂಡ ಶ್ರೀರಾಮಚಂದ್ರನ ಭಕ್ತರು. ಶ್ರೀರಾಮಚಂದ್ರ ಬೇರೆಯವರ ಸ್ವತ್ತಲ್ಲ.

ಶ್ರೀ ವೈ.ಕೆ. ರಾಮಯ್ಯ:– ಆ ವಿಷಯದಲ್ಲಿ ಮಾತನಾಡುವುದಕ್ಕೆ ನಾನು ಮುಂದೆ ಬರುತ್ತಾ ಇದ್ದೇನೆ. ಶ್ರೀರಾಮಚಂದ್ರನ ದೇವಾಲಯವನ್ನು ಎಲ್ಲಿ ಕಟ್ಟಬೇಕು, ಮಾರಮ್ಮನ ದೇವಾಲಯವನ್ನು ಎಲ್ಲಿ ಕಟ್ಟಬೇಕೆನ್ನುವ ಬಗ್ಗೆ ಮಾತನಾಡೋಣ. ನನ್ನ ಪ್ರಶ್ನೆ ಇಷ್ಟೆ, ತುಮಕೂರು ಜಿಲ್ಲೆಯಲ್ಲಿ ಈ ಹಣ ದುರುಪಯೋಗವಾಗಿದೆ. ಯಾವ ವರ್ಗಕ್ಕೆ ಈ ಸವಲತ್ತು ಸಲ್ಲಬೇಕಾಗಿತ್ತು. ಆ ವರ್ಗದವರು ಬಿಟ್ಟು ಇದನ್ನು ಬೇರೆಯವರು ಉಪಯೋಗಿಸಿಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಗೊಲ್ಲರಹಟ್ಟಿಗಳನ್ನು ಪರಿಶಿಷ್ಟರ ಪಟ್ಟಿಯಲ್ಲಿ ಸೇರಿಸುತ್ತೀರಾ ? ಆ ಡೆಫನಿಷನ್‌ನಲ್ಲಿ ಸೇರುತ್ತದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ:– ತುಮಕೂರು ಜಿಲ್ಲೆಯೊಳಗೆ ಯಾವ ಹಣ ದುರುಪಯೋಗವಾಗಿರುವುದೂ ನನ್ನ ಗಮನಕ್ಕೆ ಬಂದಿಲ್ಲ. ಏನಾದರೂ ಇನ್‌ಸ್ಟೆನ್ಸ್ ಅವರಿಗೆ ಗೊತ್ತಿದ್ದರೆ, ದಯವಿಟ್ಟು ಅದನ್ನು ನನಗೆ ತಿಳಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

(ಗೊಂದಲ)

ತಿಪಟೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘ. ನಿ

104. ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತಿಪಟೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘ ನಿ. ಆಡಳಿತಾಧಿಕಾರಿಗಳ ನಿಯಂತ್ರಣದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅಲ್ಲಿಗೆ ಆಡಳಿತಾಧಿಕಾರಿಗಳು ಬರುವ ಮೊದಲು ಹಾಗೂ ನಂತರ ಆರ್ಥಿಕ ಸ್ಥಿತಿಯ ಬಗ್ಗೆ ಮಾಹಿತಿ ಒದಗಿಸುವುದು ?

ಇ) ಆಡಳಿತಾಧಿಕಾರಿಗಳು ಬಂದ ನಂತರ ನಷ್ಟ ಉಂಟಾಗಿದ್ದಲ್ಲಿ ಅಥವಾ ವಹಿವಾಟು ಕಡಿಮೆ ಆಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ) ತಿಪಟೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘ ನಿ. ತಿಪಟೂರು